Re.No. D. 221

# भारत का राजपत्र
# The Gazette of India
# ಭಾರತ ರಾಜಪತ್ರ

**(Extraordinary)**
(ವಿಶೇಷ ಸಂಚಿಕೆ)

**भाग IX** **अनुभाग 1**

**PART IX** **SECTION 1**

**ಭಾಗ IX** **ವಿಭಾಗ 1**

प्राधिकार से प्रकाशित

**Published by Authority**

ಪ್ರಾಧಿಕಾರದ ಮೇರೆಗೆ ಪ್ರಕಟಿಸಲಾಗಿದೆ.

| | | |
|---|---|---|
| सं 1, नई दिल्ली, बुधवार, 18 मई, 2022 | वैशाख 18, 1944 (शक) | खंड. 52 |
| No.1. New Delhi. Wednesday. May 18. 2022 | Vaishaka 18. 1944 (Saka) | Vol. 52 |
| ನಂ.1. ನವದೆಹಲಿ. ಬುಧವಾರ. ಮೇ 18. 2022 | ವೈಶಾಖ 18. 1944 (ಶಕ) | ಸಂಪುಟ. 52 |


**Ministry of Law and Justice**
(Legislative Department)
New Delhi, 18th May, 2022

ಕಾನೂನು ಮತ್ತು ನ್ಯಾಯ ಮಂತ್ರಾಲಯ
(ವಿಧಾಯೀ ಇಲಾಖೆ)
**ನವದೆಹಲಿ, 18ನೇ ಮೇ, 2022**

The Translation in Kannada of the following Act, namely:- (1) THE PASSPORT (ENTRY INTO INDIA) ACT, 1920 (ACT NO. 34 OF 1920) (2) THE PREVENTION AND CONTROL OF INFECTIOUS AND CONTAGIOUS DISEASES IN ANIMALS ACT, 2009 (ACT NO. 27 OF 2009) (3) THE LEGAL METROLOGY ACT, 2009 (ACT NO. 1 OF 2010) (4) THE CLINICAL ESTABLISHMENTS (REGISTRATION AND REGULATION) ACT, 2010 (ACT NO. 23 OF 2010) (5) THE LAND PORTS AUTHORITY OF INDIA ACT, 2010 (ACT NO. 31 OF 2010) (6) THE CENTRAL EDUCATIONAL INSTITUTIONS (RESERVATION IN TEACHERS' CADRE) ACT, 2019 (ACT NO. 10 OF 2019) (7) THE MUSLIM WOMEN (PROTECTION OF RIGHTS ON MARRIAGE) ACT, 2019 (ACT NO. 20 OF 2019) -are hereby published under the authority of the President and shall be deemed to be authoritative text thereof in Kannada under clause (a) of section 2 of the Authoritative Texts (Central Laws) Act, 1973 (50 of 1973).

ಈ ಕೆಳಕಂಡ ಅಧಿನಿಯಮಗಳು ಎಂದರೆ:- (1) ಪಾಸ್‌ಪೋರ್ಟ್ (ಭಾರತದೊಳಕ್ಕೆ ಪ್ರವೇಶ) ಅಧಿನಿಯಮ, 1920 (1920ರ ಅಧಿನಿಯಮ ಸಂಖ್ಯೆ 34) (2) ಪಶು ಸೋಂಕು ರೋಗಗಳ ಮತ್ತು ಸಾಂಕ್ರಾಮಿಕ ರೋಗಗಳ ಪ್ರತಿಬಂಧ ಮತ್ತು ನಿಯಂತ್ರಣ ಅಧಿನಿಯಮ, 2009 (2009 ರ ಅಧಿನಿಯಮ ಸಂಖ್ಯೆ 27) (3) ಕಾನೂನು ಮಾಪನ ವಿಜ್ಞಾನ ಅಧಿನಿಯಮ, 2009 (2010ರ ಅಧಿನಿಯಮ ಸಂಖ್ಯೆ 1) (4) ಚಿಕಿತ್ಸಾ ಕಾರ್ಯಸಂಸ್ಥೆಗಳ (ನೋಂದಣಿ ಮತ್ತು ವಿನಿಯಮ) ಅಧಿನಿಯಮ, 2010 (2010ರ ಅಧಿನಿಯಮ ಸಂಖ್ಯೆ 23) (5) ಭಾರತ ಭೂ ಬಂದರುಗಳ ಪ್ರಾಧಿಕಾರ ಅಧಿನಿಯಮ, 2010 (2010ರ ಅಧಿನಿಯಮ ಸಂಖ್ಯೆ 31) (6) ಕೇಂದ್ರೀಯ ಶೈಕ್ಷಣಿಕ ಸಂಸ್ಥೆಗಳ (ಶಿಕ್ಷಕ ವೃಂದದಲ್ಲಿ ಮೀಸಲಾತಿ) ಅಧಿನಿಯಮ, 2019 (2019 ರ ಅಧಿನಿಯಮ ಸಂಖ್ಯೆ 10) (7) ಮುಸ್ಲಿಂ ಮಹಿಳೆಯರ (ವಿವಾಹದ ಹಕ್ಕುಗಳ ಸಂರಕ್ಷಣೆ) ಅಧಿನಿಯಮ, 2019 (2019 ರ ಅಧಿನಿಯಮ ಸಂಖ್ಯೆ 20) – ಇವುಗಳ ಕನ್ನಡ ಭಾಷಾಂತರವನ್ನು ರಾಷ್ಟ್ರಪತಿಯವರ ಪ್ರಾಧಿಕಾರದ ಮೇರೆಗೆ ಪ್ರಕಟಿಸಲಾಗಿದೆ ಮತ್ತು ಅಧಿಕೃತ ಪಾಠಗಳ (ಕೇಂದ್ರ ಕಾನೂನುಗಳು) ಅಧಿನಿಯಮ, 1973 (1973 ರ 50) ರ 2ನೇ ಪ್ರಕರಣದ (ಎ) ಖಂಡದ ಮೇರೆಗೆ ಇದನ್ನು ಈ ಅಧಿನಿಯಮದ ಅಧಿಕೃತ ಕನ್ನಡ ಪಾಠವೆಂದು ಭಾವಿಸತಕ್ಕದ್ದು.

## ಮುಸ್ಲಿಂ ಮಹಿಳೆಯರ (ವಿವಾಹದ ಹಕ್ಕುಗಳ ಸಂರಕ್ಷಣೆ) ಅಧಿನಿಯಮ, 2019

## (2019 ರ ಅಧಿನಿಯಮ ಸಂಖ್ಯೆ 20)

[31ನೇ ಜುಲೈ, 2019.]

ಮುಸ್ಲಿಂ ಮಹಿಳೆಯರ ವಿವಾಹದ ಹಕ್ಕುಗಳನ್ನು ಸಂರಕ್ಷಿಸಲು ಮತ್ತು ಅವರುಗಳ ಪತಿಯರು ತಲಾಖ್ ಅಂತ ಉಚ್ಚರಿಸುವುದರ ಮೂಲಕ ವಿವಾಹ ವಿಚ್ಛೇದನ ನೀಡುವುದನ್ನು ನಿಷೇಧಿಸಲು ಮತ್ತು ಅದಕ್ಕೆ ಸಂಬಂಧಪಟ್ಟ ಅಥವಾ ಪ್ರಾಸಂಗಿಕವಾದ ವಿಷಯಗಳಿಗೆ ಉಪಬಂಧ ಕಲ್ಪಿಸುವ ಅಧಿನಿಯಮ.

ಅದು, ಭಾರತ ಗಣರಾಜ್ಯದ ಎಪ್ಪತ್ತನೆಯ ವರ್ಷದಲ್ಲಿ ಸಂಸತ್ತಿನಿಂದ ಈ ಮುಂದಿನಂತೆ ಅಧಿನಿಯಮಿತವಾಗತಕ್ಕದ್ದು:–

### ಅಧ್ಯಾಯ I

### ಪ್ರಾರಂಭಿಕ

**1. ಚಿಕ್ಕ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ.–** (1) ಈ ಅಧಿನಿಯಮವನ್ನು ಮುಸ್ಲಿಂ ಮಹಿಳೆಯರ (ವಿವಾಹದ ಹಕ್ಕುಗಳ ಸಂರಕ್ಷಣೆ) ಅಧಿನಿಯಮ, 2019 ಎಂದು ಕರೆಯತಕ್ಕದ್ದು.

(2) ಇದು, ಜಮ್ಮು ಮತ್ತು ಕಾಶ್ಮೀರ* ರಾಜ್ಯವನ್ನು ಹೊರತುಪಡಿಸಿ ಇಡೀ ಭಾರತಕ್ಕೆ ವ್ಯಾಪ್ತವಾಗತಕ್ಕದ್ದು.

(3) ಇದು, 2018 ರ ಸೆಪ್ಟೆಂಬರ್ 19ನೆಯ ದಿನದಂದು ಜಾರಿಗೆ ಬಂದಿದೆ ಎಂದು ಭಾವಿಸತಕ್ಕದ್ದು.

**2. ಪರಿಭಾಷೆಗಳು.–** ಈ ಅಧಿನಿಯಮದಲ್ಲಿ, ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,–

(ಎ) "ವಿದ್ಯುನ್ಮಾನ ನಮೂನೆ"ಯು ಮಾಹಿತಿ ತಂತ್ರಜ್ಞಾನ ಅಧಿನಿಯಮ, 2000 (2000ದ 21) ದ ಪ್ರಕರಣ (2) ರ ಉಪಪ್ರಕರಣ (1) ರ ಖಂಡ (ಆರ್) ರಲ್ಲಿ ಅದಕ್ಕೆ ನೀಡಿದ ಅದೇ ಅರ್ಥವನ್ನೇ ಹೊಂದಿರತಕ್ಕದ್ದು;

(ಬಿ) "ಮ್ಯಾಜಿಸ್ಟ್ರೇಟ್" ಎಂದರೆ, ವಿವಾಹಿತ ಮುಸ್ಲಿಂ ಮಹಿಳೆ ವಾಸವಾಗಿರುವ ಪ್ರದೇಶದಲ್ಲಿ, ದಂಡ ಪ್ರಕ್ರಿಯಾ ಸಂಹಿತೆ, 1973 (1974ರ 2) ರ ಮೇರೆಗೆ ಅಧಿಕಾರವ್ಯಾಪ್ತಿಯನ್ನು ಚಲಾಯಿಸುತ್ತಿರುವ ಪ್ರಥಮ ದರ್ಜೆ ನ್ಯಾಯಿಕ ಮ್ಯಾಜಿಸ್ಟ್ರೇಟ್; ಮತ್ತು

(ಸಿ) "ತಲಾಖ್" ಎಂದರೆ, ತಲಾಖ್–ಇ–ಬಿದ್ದತ್ ಅಥವಾ ಮುಸ್ಲಿಂ ಪತಿಯು ಉಚ್ಚರಿಸಿದ ತತ್‌ಕ್ಷಣದ ಮತ್ತು ರದ್ದುಪಡಿಸಲಾಗದ ವಿವಾಹ ವಿಚ್ಛೇದನದ ಪರಿಣಾಮವುಳ್ಳ ಯಾವುದೇ ಇತರ ಅದೇ ಬಗೆಯ ರೀತಿಯ ತಲಾಖ್.

### ಅಧ್ಯಾಯ II

### ತಲಾಖ್‌ನ ಘೋಷಣೆಯು ಅನೂರ್ಜಿತವಾಗುವುದು ಮತ್ತು ಕಾನೂನುಬಾಹಿರವಾಗುವುದು

**3. ತಲಾಖ್ ಅನೂರ್ಜಿತವಾಗುವುದು ಮತ್ತು ಕಾನೂನುಬಾಹಿರವಾಗುವುದು.–** ಮುಸ್ಲಿಂ ಪತಿಯು, ತನ್ನ ಪತ್ನಿಗೆ, ಮಾತುಗಳಲ್ಲಿ ಅಥವಾ ಲಿಖಿತ ಪದಗಳಲ್ಲಿ ಅಥವಾ ವಿದ್ಯುನ್ಮಾನ ನಮೂನೆಯಲ್ಲಿ ಅಥವಾ ಯಾವುದೇ ಇತರ ರೀತಿಯಲ್ಲಾದರೂ ಉಚ್ಚರಿಸಿದ ತಲಾಖ್ ಅನೂರ್ಜಿತವಾಗತಕ್ಕದ್ದು ಮತ್ತು ಕಾನೂನುಬಾಹಿರವಾಗತಕ್ಕದ್ದು.

**4. ತಲಾಖ್ ಉಚ್ಚರಿಸಿದ್ದಕ್ಕಾಗಿ ದಂಡನೆ.–** ಪ್ರಕರಣ (3) ರಲ್ಲಿ ಉಲ್ಲೇಖಿಸಲಾದ ಯಾರೇ ಮುಸ್ಲಿಂ ಪತಿಯು ಆತನ ಪತ್ನಿಗೆ ತಲಾಖ್ ಅಂತ ಉಚ್ಚರಿಸಿದರೆ, ಅವನು ಮೂರು ವರ್ಷಗಳಿಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದೊಂದಿಗೆ ದಂಡಿತನಾಗತಕ್ಕದ್ದು ಮತ್ತು ಜುಲ್ಮಾನೆಗೆ ಗುರಿಯಾಗತಕ್ಕದ್ದು.

---

*ನೋಡಿ ಅಧಿಸೂಚನೆ ಸಂಖ್ಯೆ ಎಸ್.ಓ 3912 (ಇ) ದಿನಾಂಕ: 30ನೇ ಅಕ್ಟೋಬರ್ 2019. ಈ ಅಧಿನಿಯಮವು ಜಮ್ಮು ಮತ್ತು ಕಾಶ್ಮೀರ ಕೇಂದ್ರಾಡಳಿತ ಪ್ರದೇಶಕ್ಕೆ ಮತ್ತು ಲಡಾಖ್ ಕೇಂದ್ರಾಡಳಿತ ಪ್ರದೇಶಕ್ಕೆ ಅನ್ವಯವಾಗುವಂತೆ ಮಾಡಲಾಗಿದೆ.

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment WPP No. 297



## ಅಧ್ಯಾಯ III

### ವಿವಾಹಿತ ಮುಸ್ಲಿಂ ಮಹಿಳೆಯ ಹಕ್ಕುಗಳ ಸಂರಕ್ಷಣೆ

5. **ಜೀವನ ನಿರ್ವಹಣೆ ಭತ್ಯೆ.–** ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನಲ್ಲಿ ಒಳಗೊಂಡಿರುವ ಉಪಬಂಧಗಳ ಸಾಮಾನ್ಯ ಅನ್ವಯಕ್ಕೆ ಬಾಧಕವಾಗದಂತೆ, ಯಾವ ಮುಸ್ಲಿಂ ಮಹಿಳೆಗೆ ತಲಾಖ್ ಅಂತ ಉಚ್ಚರಿಸಲಾಗಿದೆಯೋ ಆ ಮುಸ್ಲಿಂ ಮಹಿಳೆಯು, ಮ್ಯಾಜಿಸ್ಟ್ರೇಟನು ನಿರ್ಧರಿಸಬಹುದಾದಂತೆ, ಅವಳು ಮತ್ತು ಅವಳ ಅವಲಂಬಿತ ಮಕ್ಕಳಿಗೆ ಜೀವನ ನಿರ್ವಹಣೆ ಭತ್ಯೆಯ ಮೊಬಗಲನ್ನು ಆಕೆಯ ಪತಿಯಿಂದ ಪಡೆಯಲು ಹಕ್ಕುಳ್ಳವಳಾಗಿರತಕ್ಕದ್ದು.

6. **ಅಪ್ರಾಪ್ತ ವಯಸ್ಕ ಮಕ್ಕಳ ಅಭಿರಕ್ಷೆ.–** ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನಲ್ಲಿ ಏನೇ ಒಳಗೊಂಡಿದ್ದಾಗ್ಯೂ, ವಿವಾಹಿತ ಮುಸ್ಲಿಂ ಮಹಿಳೆಯು, ಆಕೆಯ ಪತಿಯು ತಲಾಖ್ ಅಂತ ಉಚ್ಚರಿಸಿದ ಸಂದರ್ಭದಲ್ಲಿ, ಮ್ಯಾಜಿಸ್ಟ್ರೇಟನು ನಿರ್ಧರಿಸಬಹುದಾದಂಥ ರೀತಿಯಲ್ಲಿ, ಅವಳ ಅಪ್ರಾಪ್ತ ವಯಸ್ಕ ಮಕ್ಕಳನ್ನು ಅಭಿರಕ್ಷೆಗೆ ತೆಗೆದುಕೊಳ್ಳಲು ಹಕ್ಕುಳ್ಳವಳಾಗಿರತಕ್ಕದ್ದು.

7. **ಅಪರಾಧವು ಸಂಜ್ಞೇಯವಾಗಿರುವುದು, ರಾಜಿ ಮಾಡಿಕೊಳ್ಳಬಹುದಾಗಿರುವುದು, ಇತ್ಯಾದಿ.–** ದಂಡ ಪ್ರಕ್ರಿಯಾ ಸಂಹಿತೆ, 1973 (1974 ರ 2) ರಲ್ಲಿ ಏನೇ ಒಳಗೊಂಡಿದ್ದಾಗ್ಯೂ,–

(ಎ) ಈ ಅಧಿನಿಯಮದ ಮೇರೆಗೆ ದಂಡನೀಯ ಅಪರಾಧವು, ಯಾವ ಮುಸ್ಲಿಂ ಮಹಿಳೆಗೆ ತಲಾಖ್ ಅಂತ ಉಚ್ಚರಿಸಲಾಗಿದೆಯೋ ಆ ಮುಸ್ಲಿಂ ಮಹಿಳೆಯು ಅಥವಾ ರಕ್ತ ಸಂಬಂಧದಿಂದ ಅಥವಾ ವಿವಾಹದಿಂದಾಗಿ ಆಕೆಯ ಸಂಬಂಧಿಯಾದ ಯಾರೇ ವ್ಯಕ್ತಿಯು ಪೊಲೀಸ್ ಠಾಣೆಯ ಪ್ರಭಾರದಲ್ಲಿರುವ ಅಧಿಕಾರಿಗೆ ಅಪರಾಧ ಮಾಡಿರುವುದಕ್ಕೆ ಸಂಬಂಧಪಟ್ಟ ಮಾಹಿತಿಯನ್ನು ನೀಡಿದ್ದರೆ, ಸಂಜ್ಞೇಯವಾದುದಾಗಿರತಕ್ಕದ್ದು;

(ಬಿ) ಈ ಅಧಿನಿಯಮದ ಮೇರೆಗೆ ದಂಡನೀಯವಾದ ಅಪರಾಧವು ಯಾವ ಮುಸ್ಲಿಂ ಮಹಿಳೆಗೆ ತಲಾಖ್ ಅಂತ ಉಚ್ಚರಿಸಲಾಗಿದೆಯೋ ಆ ಮುಸ್ಲಿಂ ಮಹಿಳೆಯ ಸೂಚನೆ ಮೇರೆಗೆ ಮ್ಯಾಜಿಸ್ಟ್ರೇಟ್‌ನ ಅನುಮತಿಯೊಂದಿಗೆ, ಅವನು ನಿರ್ಧರಿಸಬಹುದಾದಂಥ ನಿಬಂಧನೆಗಳು ಮತ್ತು ಷರತ್ತುಗಳ ಮೇಲೆ, ರಾಜಿ ಮಾಡಿಕೊಳ್ಳಬಹುದಾದುದಾಗಿರತಕ್ಕದ್ದು;

(ಸಿ) ಈ ಅಧಿನಿಯಮದ ಮೇರೆಗೆ ದಂಡನೀಯವಾದ ಅಪರಾಧದ ಆಪಾದಿತನು ಜಾಮೀನಿಗಾಗಿ ಅರ್ಜಿಯನ್ನು ಸಲ್ಲಿಸಿದಾಗ ಮತ್ತು ಯಾವ ಮುಸ್ಲಿಂ ಮಹಿಳೆಗೆ ತಲಾಖ್ ಅಂತ ಉಚ್ಚರಿಸಲಾಗಿದೆಯೋ ಆ ವಿವಾಹಿತ ಮುಸ್ಲಿಂ ಮಹಿಳೆಯ ಅಹವಾಲನ್ನು ಕೇಳಿದ ತರುವಾಯ, ಅಂಥ ವ್ಯಕ್ತಿಗೆ ಜಾಮೀನನ್ನು ಮಂಜೂರು ಮಾಡಲು ಸಾಕಷ್ಟು ಕಾರಣಗಳು ಇವೆ ಎಂದು ಮ್ಯಾಜಿಸ್ಟ್ರೇಟ್‌ನಿಗೆ ಮನದಟ್ಟಾದ ಹೊರತು, ಜಾಮೀನಿನ ಮೇಲೆ ಬಿಡುಗಡೆ ಮಾಡತಕ್ಕದ್ದಲ್ಲ.

8. **ನಿರಸನ ಮತ್ತು ಉಳಿಸುವಿಕೆ.–** (1) ಮುಸ್ಲಿಂ ಮಹಿಳೆಯರ (ವಿವಾಹದ ಹಕ್ಕುಗಳ ಸಂರಕ್ಷಣೆ) ಎರಡನೇ ಅಧ್ಯಾದೇಶ, 2019 (2019ರ ಅಧ್ಯಾದೇಶ 4) ನ್ನು ಈ ಮೂಲಕ ನಿರಸನಗೊಳಿಸಲಾಗಿದೆ.

(2) ಅಂಥ ನಿರಸನದಲ್ಲಿ ಏನೇ ಇದ್ದರೂ, ಮುಸ್ಲಿಂ ಮಹಿಳೆಯರ (ವಿವಾಹದ ಹಕ್ಕುಗಳ ಸಂರಕ್ಷಣೆ) ಎರಡನೇ ಅಧ್ಯಾದೇಶ 2019 (2019 ರ ಅಧ್ಯಾದೇಶ 4)ರ ಮೇರೆಗೆ ಮಾಡಿದ ಯಾವುದೇ ಕಾರ್ಯವನ್ನು ಅಥವಾ ತೆಗೆದುಕೊಂಡ ಯಾವುವೇ ಕ್ರಮವನ್ನು, ಈ ಅಧಿನಿಯಮದ ಉಪಬಂಧಗಳ ಮೇರೆಗೆ ಮಾಡಲಾಗಿದೆ ಎಂದು ಅಥವಾ ತೆಗೆದುಕೊಳ್ಳಲಾಗಿದೆ ಎಂದು ಭಾವಿಸತಕ್ಕದ್ದು.

ಡಾ. ರೀಟಾ ವಸಿಷ್ಠ
ಭಾರತ ಸರ್ಕಾರದ ಕಾರ್ಯದರ್ಶಿ

ಮುದ್ರಕರು ಹಾಗೂ ಪ್ರಕಾಶಕರು:– ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು
SUNIL GARDE